# ಹಳಿಯಾಳ: ಬಾಸ್ಕೆಟ್ ಬಾಲ್ ಪಂದ್ಯಾವಳಿಯಲ್ಲಿ ಸಾಧನೆ



»ಜನಮಾಧ್ಯಮ, ಹಳಿಯಾಳ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯ ಮಹಿಳಾ ವಿಭಾಗದ ಬಾಸ್ಕೆಟ್ ಬಾಲ್ ಪಂದ್ಯಾವಳಿಯು ಕೆಎಲ್ಎಸ್ ವಿಡಿಐಟಿ ಹಳಿಯಾಳದಲ್ಲಿ ನ. 5ರಂದು ಜರುಗಿತು. ಬೆಂಗಳೂರು ವಿಭಾಗವನ್ನು ಹೊರತುಪಡಿಸಿ ಉಳಿದ ವಿಭಾಗದ ಒಟ್ಟು 9 ತಂಡಗಳು ಈ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದವು. ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದ ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ಕ್ರೀಡಾ ಮನೋಭಾವದಿಂದ ಪಂದ್ಯಾವಳಿಯಲ್ಲಿ ಸ್ಪರ್ಧಿಸುವಂತೆ ವಿದ್ಯಾರ್ಥಿಗಳಿಗೆ ಕರೆನೀಡಿದರು. ವಿಶ್ವವಿದ್ಯಾಲಯ ಮಟ್ಟದ ವಿವಿಧ ಪಂದ್ಯಾವಳಿಗೆ ಮಹಾವಿದ್ಯಾಲಯ ಆತಿಥ್ಯ ವಹಿಸಿರುವುದು ಗಮನಾರ್ಹವಾಗಿದೆ. ಪ್ರೊ. ಮಂಜುನಾಥ, ಡಾ. ಮಹೇಂದ್ರ ದೀಕ್ಷಿತ್, ಡಾ ಆಶಿಕ್ ಬಳ್ಳಾರಿ, ಪ್ರೊ ಎಸ್ ಡಿ ಕುಲಕರ್ಣಿ ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಎನ್ಐಇ ಮೈಸೂರ್, ಎಸ್‌ಜೆಸಿಇ ಮಂಗಳೂರು, ಜಿಐಟಿ ಬೆಳಗಾವಿ, ಎಸ್‌ಡಿಎಂಸಿ ಇಟಿ ಧಾರವಾಡ,ಪಿಇಎಸ್ ಮಂಡ್ಯ, ಕೆಎಲ್ಇಐಟಿ ಹುಬ್ಬಳ್ಳಿ, ಜೆಸಿಇಟಿ ಹುಬ್ಬಳ್ಳಿ, ಬಿಐಟಿ ದಾವಣಗೆರೆ, ವಿಡಿಐಟಿ ಹಳಿಯಾಳ ಈ ಪಂದ್ಯಾವಳಿಯಲ್ಲಿ ಭಾಗವಹಿಸಿದ ತಂಡಗಳಾಗಿವೆ. ಈ ಪಂದ್ಯಾವಳಿಯಲ್ಲಿ ಉತ್ತಮ ಪ್ರದರ್ಶನ ತೋರಿದ ನಾಲ್ಕು ತಂಡಗಳಾದ ಎನ್ ಐಇ ಮೈಸೂರು, ಎಸ್ ಡಿಎಂಸಿ ಇಟಿ ಧಾರವಾಡ, ಎಸ್ ಜೆಸಿಇ ಮಂಗಳೂರು ಹಾಗೂ ವಿಡಿಐಟಿ ಹಳಿಯಾಳವು ಬೆಂಗಳೂರಿನಲ್ಲಿ ನಡೆಯಲಿರುವ ಮುಂದಿನ ಸುತ್ತಿನ ಪಂದ್ಯಾವಳಿಗೆ ಆಯ್ಕೆಯಾಗಿದೆ. ಸೌಭಾಗ್ಯ ಎ, ಸಂಜನಾ ಡಿ, ಸುಪ್ರೀತಾ ಎಚ್, ಶ್ರೀ ಲಕ್ಷ್ಮಿ ಎಂ, ಉಮಾ ಎಚ್, ಸ್ನೇಹಾ ಡಿ, ನಿಕಿತಾ ಕೆ, ಶ್ರಾವಣಿ ಎಸ್, ಮೇಘಾ ಪಿ ಇವರುಗಳು ಕೆಎಲ್ಎಸ್ ವಿಡಿಐಟಿ ತಂಡವನ್ನು ಪ್ರತಿನಿಧಿಸಿದ್ದರು. ಮಹಾವಿದ್ಯಾಲಯದ ವಿದ್ಯಾರ್ಥಿನಿಯರ ಸಾಧನೆಗೆ ಆಡಳಿತ ಮಂಡಳಿ ಅಧ್ಯಕ್ಷ ವಿನಾಯಕ ಲೋಕುರ್, ಡಾ. ವಿ ಎ ಕುಲಕರ್ಣಿ ಹರ್ಷ ವ್ಯಕ್ತಪಡಿಸಿದ್ದಾರೆ. ದೈಹಿಕ ಶಿಕ್ಷಣ ನಿರ್ದೇಶಕ ಗದಿಗೆಪ್ಪ ಎಳ್ಳೂರ್ ಹಾಗೂ ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿಗಳು ವಿದ್ಯಾರ್ಥಿನಿಯರಿಗೆ ಶುಭ ಹಾರೈಸಿ ಅಭಿನಂದಿಸಿದ್ದಾರೆ.

Main Edition
Nov 07, 2024 Page No. 3
Powered by: erelego.com

# ವಿಟಿಯು ಮಹಿಳಾ ವಿಭಾಗ ಬಾಸ್ಕೆಟ್ ಬಾಲ್ ಪಂದ್ಯಾವಳಿ ಯಶಸ್ವಿ



**ಹಳ್ಳಿಯ ಸಂದೇಶ ನ್ಯೂಸ್**

ಹಳಿಯಾಳ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯ ಮಹಿಳಾ ವಿಭಾಗದ ಬಾಸ್ಕೆಟ್ ಬಾಲ್ ಪಂದ್ಯಾವಳಿಯು ಕೆ ಎಲ್ ಎಸ್ ವಿ ಡಿ ಐ ಟಿ ಹಳಿಯಾಳದಲ್ಲಿ ನವಂಬರ್ 5ರಂದು ಜರುಗಿತು. ಬೆಂಗಳೂರು ವಿಭಾಗವನ್ನು ಹೊರತುಪಡಿಸಿ ಉಳಿದ ವಿಭಾಗದ ಒಟ್ಟು 9 ತಂಡಗಳು ಈ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದವು. ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದ ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ಕ್ರೀಡಾ ಮನೋಭಾವದಿಂದ ಪಂದ್ಯಾವಳಿಯಲ್ಲಿ ಸ್ಪರ್ಧಿಸುವಂತೆ ವಿದ್ಯಾರ್ಥಿಗಳಿಗೆ ಕರೆನೀಡಿದರು. ವಿಶ್ವವಿದ್ಯಾಲಯ ಮಟ್ಟದ ವಿವಿಧ ಪಂದ್ಯಾವಳಿಗೆ ಮಹಾವಿದ್ಯಾಲಯ ಆತಿಥ್ಯ ವಹಿಸಿರುವುದು ಗಮನಾರ್ಹವಾಗಿದೆ.

ಪ್ರೊ. ಮಂಜುನಾಥ, ಡಾ. ಮಹೇಂದ್ರ ದೀಕ್ಷಿತ್, ಡಾ ಆಶಿಕ್ ಬಳ್ಳಾರಿ, ಪ್ರೊ ಎಸ್ ಡಿ ಕುಲಕರ್ಣಿ ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಎನ್ ಐ ಇ ಮೈಸೂರ್, ಎಸ್ ಜೆ ಸಿ ಇ ಮಂಗಳೂರು, ಜಿ ಐ ಟಿ ಬೆಳಗಾವಿ, ಎಸ್‌ಡಿಎಂಸಿ ಇ ಟಿ ಧಾರವಾಡ,ಪಿ ಇ ಎಸ್ ಮಂಡ್ಯ, ಕೆ ಎಲ್ ಇ ಐ ಟಿ ಹುಬ್ಬಳ್ಳಿ, ಜೆ ಸಿ ಇ ಟಿ ಹುಬ್ಬಳ್ಳಿ, ಬಿ ಐ ಟಿ ದಾವಣಗೆರೆ, ವಿಡಿಐಟಿ ಹಳಿಯಾಳ ಈ ಪಂದ್ಯಾವಳಿಯಲ್ಲಿ ಭಾಗವಹಿಸಿದ ತಂಡಗಳಾಗಿವೆ.

ಈ ಪಂದ್ಯಾವಳಿಯಲ್ಲಿ ಉತ್ತಮ ಪ್ರದರ್ಶನ ತೋರಿದ ನಾಲ್ಕು ತಂಡಗಳಾದ ಎನ್ ಐ ಇ ಮೈಸೂರು, ಎಸ್ ಡಿ ಎಂ ಸಿ ಇ ಟಿ ಧಾರವಾಡ, ಎಸ್ ಜೆ ಸಿ ಇ ಮಂಗಳೂರು ಹಾಗೂ ವಿ ಡಿ ಐ ಟಿ ಹಳಿಯಾಳವು ಬೆಂಗಳೂರಿನಲ್ಲಿ ನಡೆಯಲಿರುವ ಮುಂದಿನ ಸುತ್ತಿನ ಪಂದ್ಯಾವಳಿಗೆ ಆಯ್ಕೆಯಾಗಿದೆ. ಸೌಭಾಗ್ಯ ಎ, ಸಂಜನಾ ಡಿ, ಸುಪ್ರೀತಾ ಎಚ್, ಶ್ರೀ ಲಕ್ಷ್ಮಿ ಎಂ, ಉಮಾ ಎಚ್, ಸ್ನೇಹಾ ಡಿ, ನಿಕಿತಾ ಕೆ, ಶ್ರಾವಣಿ ಎಸ್, ಮೇಘಾ ಪಿ ಇವರುಗಳು ಕೆ ಎಲ್ ಎಸ್ ವಿ ಡಿ ಐ ಟಿ ತಂಡವನ್ನು ಪ್ರತಿನಿಧಿಸಿದ್ದರು. ಮಹಾವಿದ್ಯಾಲಯದ ವಿದ್ಯಾರ್ಥಿನಿಯರ ಸಾಧನೆಗೆ ಆಡಳಿತ ಮಂಡಳಿ ಅಧ್ಯಕ್ಷ ವಿನಾಯಕ ಲೋಕುರ್, ಡಾ. ವಿ ಎ ಕುಲಕರ್ಣಿ ಹರ್ಷ ವ್ಯಕ್ತಪಡಿಸಿದ್ದಾರೆ. ದೈಹಿಕ ಶಿಕ್ಷಣ ನಿರ್ದೇಶಕ ಗದಿಗೆಪ್ಪ ಎಳ್ಳೂರ್ ಹಾಗೂ ಎಲ್ಲಾ ಬೋಧಕ ಬೋಧ-ಕೇತರ ಸಿಬ್ಬಂದಿಗಳು ವಿದ್ಯಾರ್ಥಿನಿಯರಿಗೆ ಶುಭ ಹಾರೈಸಿ ಅಭಿನಂದಿಸಿದ್ದಾರೆ.